**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5037/2023 ಫ್ರಾಸಾ-23
ಚಾಸಾ-30

ದಿನಾಂಕಃ 26-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರಮೇಶ್ |
| **ತಂದೆಯ / ಗಂಡನ ಹೆಸರು** | ಲೇಟ್ ಪಲ್ಲಣ್ಣ |
| **ವಯಸ್ಸು** | 52 |
| **ಉದ್ಯೋಗ** | ವ್ಯವಸಾಯ |
| **ವಾಸಸ್ಥಳ** | ಕೆ. ರಾಂಪುರ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನಿಪಿ-18 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು. ದಿ.03.11.2023 ರಂದು ಪಾವಗಡ ಪೊಲೀಸ್ ಠಾಣೆಯಲ್ಲಿ ನಿಪಿ-18 ಕ್ಕೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಪಾವಗಡ ವೃತ್ತ ನಿರೀಕ್ಷರು ಇದ್ದು ಅವರು ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಪೊಲೀಸ್ ಠಾಣೆಯಲ್ಲಿ ಚಾಸಾ-14 ರವರು ಹಾಜರಿದ್ದರು. ಚಾಸಾ-14 ರವರು ಪೊಲೀಸರ ಮುಂದೆ ಮೊಬೈಲ್ ಹಾಜರುಪಡಿಸಿರುತ್ತಾರೆ. ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚಾಸಾ-14 ರವರು ಮೊಬೈಲ್ ನ್ನು ಹಾಜರುಪಡಿಸಿರುತ್ತಾರೆ. ಮೊಬೈಲ್ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಮು.ಮಾ-2 ಮೊಬೈಲ್ ನ್ನು ನೋಡಿ ಗುರುತಿಸಿರುತ್ತಾರೆ. ಪೋಲೀಸರು ನನ್ನ ಸಹಿಯನ್ನು ಬಿಳಿ ಹಾಳೆ ಮೇಲೆ ತೆಗೆದುಕೊಂಡಿರುತ್ತಾರೆ. ನಿಪಿ-18 ರಲ್ಲಿ ಬರೆದ ವಿಷಯ ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ಚಾಸಾ-14 ರವರು ಅತಿಥಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಲಕ್ಷ್ಮೀ ರವರು ಪೋನ್ ಮಾಡಿ ಅಂಗನವಾಡಿ ಕೆಲಸ ಪಡೆಯುವ ಬಗ್ಗೆ ಆಗಾಗ್ಗೆ ವಿಚಾರ ಮಾಡುತ್ತಿದ್ದರು , ಸದರಿ ಮೊಬೈಲ್ ನ್ನು ಪೊಲೀಸರ ಮುಂದೆ ಚಾಸಾ-14 ರವರು ಹಾಜರುಪಡಿಸಿದ್ದು ಅದನ್ನು ನಿಪಿ-18 ರಂತೆ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ , ನನ್ನ ಸಮಕ್ಷಮ ಬರವಣಿಗೆ ಮಾಡಿಕೊಂಡು ಓದಿ ಹೇಳಿ ಸಹಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಪ್ರಿಂಟ್ ಆದ ಮೇಲೆ ಓದಿ ಹೇಳಿ ನನ್ನ ಸಹಿ ತೆಗೆದುಕೊಂಡಿರುತ್ತಾರೆ ಎಂದರೆ ನಿಜ. ಚಾಸಾ-14 ರವರು ಲಕ್ಷ್ಮೀ ರವರ ಜೊತೆ ಮಾತನಾಡಿರುವುದು ತಿಳಿಸಿರುತ್ತಾರೆ ಎನ್ನುವುದು ನಿಜ. ಪಂಚನಾಮೆಯನ್ನು ಮಾಧ್ಯಾಹ್ನ 1-00 ರಿಂದ 1-30 ರವರೆಗೆ ಮಾಡಿರುತ್ತಾರೆ ಎನ್ನುವುದು ನಿಜ. ಪಂಚನಾಮೆಗೆ ನನ್ನದು, ಚಾಸಾ-14 ಮತ್ತು ಮಂಜುನಾಥ ರವರ ಸಹಿ ತೆಗೆದುಕೊಂಡಿರುತ್ತಾರೆ ಎನ್ನುವುದು ನಿಜ.

**<u>ಪಾಟೀಸವಾಲು ಶ್ರೀ. ಪಿ.ಎನ್.ಆರ್. ವಕೀಲರಿಂದ ಆರೋಪಿ ಪರವಾಗಿಃ-</u>**

ಪೊಲೀಸರು ನನ್ನ ಎರಡು ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಪೊಲೀಸರು ನನ್ನ ಸಹಿಯನ್ನು ದಿ. 03.11.2023 ರಂದು ಮತ್ತು ದಿ. 08.11.2023 ರಂದು ತೆಗೆದುಕೊಂಡಿರುತ್ತಾರೆ. ಸದರಿ ಎರಡು ಸಹಿಗಳನ್ನು ಪೊಲೀಸ್ ಠಾಣೆಯಲ್ಲಿಯೇ ಪಡೆದುಕೊಂಡಿರುತ್ತಾರೆ. ಎರಡು ಸಹಿ ಮಾಡುವ ಸಮಯದಲ್ಲಿ ನಾನು ಮತ್ತು ನರಸಿಂಹಮೂರ್ತಿ ಹಾಜರಿದ್ದೇವು. ನನಗೆ ವೃತ್ತ ನಿರೀಕ್ಷಕರಾದ ಗಿರೀಶ್ ರವರು ಕರೆದಿದ್ದರು ,ಅವರು ನನಗೆ ಲಿಖಿತವಾಗಿ ನೋಟೀಸು ಕೊಟ್ಟಿರುವುದಿಲ್ಲ.

ನಾವು ದಿನನಿತ್ಯ ಪಾವಗಡಕ್ಕೆ ಬರುತ್ತಿತ್ತು ಪೊಲೀಸ್ ಠಾಣೆಗೆ ಹೋದಾಗ ನಮ್ಮ ಸಹಿ ತೆಗೆದುಕೊಂಡಿರುತ್ತಾರೆ. ನನ್ನನ್ನು ಪ್ರತ್ಯೇಕವಾಗಿ ಯಾರು ಕರೆದಿರುವುದಿಲ್ಲ ಎನ್ನುವುದು ನಿಜ, ಪೊಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎನ್ನುವುದು ನಿಜ. ನಿಪಿ-18 ರಲ್ಲಿ ಬರೆದ ವಿಷಯವನ್ನು ನಿಖರವಾಗಿ ಹೇಳಲು ಆಗುವುದಿಲ್ಲ ಎನ್ನುವುದು ನಿಜ. ಚಾಸಾ-14 ರವರು ಪೊಲೀಸರ ಮುಂದೆ ಹಾಜರುಪಡಿಸಿ ಮೊಬೈಲ್ ಯಾವ ಕಂಪನಿಯದು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಮೊಬೈಲ್ ಒಪನ್ ಮಾಡಿ ಸೀಮ್ ಯಾವ ಕಂಪನಿಯದು ಎಂದು ನೋಡಿರುವುದಿಲ್ಲ. ಸದರಿ ಮೊಬೈಲ್ ನ ಐ.ಡಿ. ನಂಬರ್ ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಮೊಬೈಲ್ ನ ಐ.ಎಂ.ಇ.ಐ ನಂಬರ್ ನ್ನು ಓದಿ ಹೇಳಿರುವುದಿಲ್ಲ. ಪೊಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಪೊಲೀಸರು ಯಾರ ಕೊಲೆ , ಎಲ್ಲಿ ಯಾರು ಮಾಡಿರುತ್ತಾರೆಂದು ಹೇಳಿರುವುದಿಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**